ಆಟದಲ್ಲಿದ್ದವು. ಪಸಂದಾಗಿ ಆಟ ನಡೆದಿತ್ತು. ಖುಷಿಯಲ್ಲಿ ಕೂಗುಹಾಕುತ್ತಿದ್ದವು. ತಂಗಿಯೂ ಎದ್ದು ಬಂದಿದ್ದರೆ ಇವುಗಳ ಜೊತೆ ಆಟವಾಡಬಹುದಾಗಿತ್ತೆಂದು ಬಲುವಾಗಿ ಹಂಬಲಿಸಿದ್ದೆ.

ಗೋದಲಿಯಲ್ಲಿ ಆಕಳು ಆತಂಕದಲ್ಲಿ ಗದ್ದಲ ಮಾಡುವ ಶಬ್ದ ಕೇಳಿ, ಗೋದಲಿಗೆ ಹೋದಾಗ ಬಿಚ್ಚಿಕೊಂಡ ಕರು ತಾಯಿಯ ಮೊಲೆಯನ್ನು ಗುದ್ದಿ ಗುದ್ದಿ ಹಾಲು ಕುಡಿಯುತ್ತಿತ್ತು. ನಾನು ಹೋದಾಗ ಆಕಳು ಬೇಸರಗೊಂಡಂತೆ ನನ್ನತ್ತ ತನ್ನ ತಲೆ ಬೀಸಹತ್ತಿತು. ಅವುಗಳನ್ನು ನೋಡುತ್ತ ಅವ್ವ ಹಾಗು ತಂಗಿಯ ನೆನಪಾಗಿ ಸಣ್ಣಗೇ ಕಣ್ಣು ಮುಚ್ಚಿದ್ದೆ.

ಒಂದು ದಿನ ರಾತ್ರಿ ಮನೆಯ ಹಿತ್ತಲದ ಬಣವಿಯ ಬಳಿಯ ಬೇಲಿಯಲ್ಲಿ ಸಪ್ಪಳ ಕೇಳಿ ಬೆಚ್ಚಿನಿಂತಿದ್ದೆ. ಫಳ ಫಳ ಹೊಳೆಯುವ ಕಣ್ಣುಗಳ ಮೊಲವೊಂದು ಪುಟ್ಟ ಬಿಳಿಯ ಮೋಡದ ಬೆಳ್ಳಿಯ ರಾಶಿಯಂತೆ ನನ್ನ ಕಡೆಯೇ ನೋಡುತ್ತ ತೂಕಡಿಸಹತ್ತಿತ್ತು. ಮನೆಯ ಪಡಸಾಲೆಯ ಮೂಲೆಯಲ್ಲಿ ತೂಕಡಿಸುತ್ತಿದ್ದ ತಂಗಿಯನ್ನು ಎತ್ತಿ ಹಾಸಿಗೆಯ ಮೇಲೆ ಮಲಗಿಸಿದ್ದೆ.

ಒಂದು ಮಧ್ಯಾಹ್ನ ಮಲಪ್ರಭಾ ನದಿಯ ತಟದಲ್ಲಿ ಕುಳಿತು ಹರಿದು ಹೋಗುವ ನೀರನ್ನೇ ದಿಟ್ಟಿಸಿ ನೋಡುತ್ತಿದ್ದೆ. ರವಿವರ್ಮನು ಬರೆದ ಚಿತ್ರ ನೀರಲ್ಲಿ ತೇಲಿ ಹೋದಂತೆನಿಸಿ, ಹೊರಳಿ ನೋಡಿದಾಗ ಸಾಕ್ಷಾತ್ ಲಕ್ಷ್ಮಿಯಂತಿದ್ದ ತಂಗಿ ನನ್ನ ಹಿಂದೆಯೇ ನಿಂತಿದ್ದಳು. ಹರಿದುಹೋಗುವ ನೀರು ಆಕೆಯ ಮುಖದ ಲಹರಿಯನ್ನೆಲ್ಲ ತನ್ನ ಜೊತೆ ಆಗಲೇ ಸಾಗ ಹಾಕಿತ್ತು

ಒಂದು ದಿನ ಬೆಳಗಿನ ಹೊತ್ತು ಎದ್ದು ಅಂಗಳಕ್ಕೆ ಬಂದಾಗ ಆಕಾಶಕ್ಕೆ ಸುಣ್ಣ ಹಚ್ಚಿದಂತೆ ಕಂಡು ಅಚ್ಚರಿಗೊಂಡೆ, ಗುಂಪುಗುಂಪಾದ ಬಿಳಿ ಪಾರಿವಾಳಗಳು ಯಾವುದೋ ನಿಬ್ಬಣಕ್ಕೆ ಹೊರಟಿದ್ದವು. ಗುಂಪು ಪಾರಿವಾಳಗಳ ಆ ಹಾರಾಟ ನೋಡುತ್ತಿದ್ದಂತೆ, ಹಿಂದೆ ನಿಂತ ತಂಗಿ ತನ್ನ ಗಗ್ಗರಿಯಿಂದ ನನ್ನನ್ನು ಮೆಲ್ಲಗೇ ತಟ್ಟುತ್ತಿದ್ದಳು.

ಒಂದು ದಿನ ಮುಂಜಾನೆಯ ಹೊಂಗಿರಣಗಳ ಅಪರಂಜಿ ಎಲ್ಲೆಡೆಗೆ ಚೆಲ್ಲಿತ್ತು. ಸೂರ್ಯ ಇದೀಗ ಟಂಕಿಸಿದ ದೊಡ್ಡ ನಾಣ್ಯದಂತೆ ಕಾಣುತ್ತಿದ್ದ. ರಾತ್ರಿಯ ನಿದ್ರೆಯಿಂದ ಎಚ್ಚೆತ್ತು ಹೊರಗೆ ಬಂದು ನಿಂತಾಗ ಲೋಕವೇ ಬೆಳಕಿನ ಅರಮನೆಯಂತಾಗಿತ್ತು. ಕಣ್ಣುಜ್ಜಿ ಬೆರಗಿನಲ್ಲಿ ಎದುರಿಗೆ ನೋಡುತ್ತಿದ್ದಾಗ, ನೊರೆ ಚೆಲ್ಲುವ ಹಾಲಿನ ತಂಬಿಗೆ ಹಿಡಿದು ತಂಗಿ ಎದುರಿನಲ್ಲಿ ನಿಂತು, ಕುಲು ಕುಲು ನಗುತ್ತಿದ್ದಳು.

ಈ ನೆನಪುಗಳೇ ಹಾಗೆ... ರಾತ್ರಿಯಲ್ಲಿ ನಡೆದ ಊರ ಕಡೆಯ ಹಾದಿಯಂತಿರುತ್ತವೆ, ದಾರಿಯ ಎರಡು ಬದಿಯಲ್ಲಿಯೂ ನಿಂತು ಚಾಮರ ಬೀಸಿ ತಂಗಾಳಿ ಕೊಡುವ ಮರಗಳಂತಿರುತ್ತವೆ.

★★★

ಆಕೆಗೆ ಹುರೆಕ್ಕಿ ಹೋಳಿಗಿ ಲಕ್ಕವ್ವ ಎಂದೇ ಕರೆಯುತ್ತಿದ್ದರು. ಆಕೆಯ ಕೈಬೆರಳುಗಳಲ್ಲಿ ತಿಂಡಿ ತಿನಿಸಿನ ವಿಶೇಷ ರುಚಿಯ ಊಟಗಳೇ ಕೀಳುತ್ತಿದ್ದವೆಂದು ಸುದ್ದಿ ಇತ್ತು. ಒಂದು ದಿನ ಕಣಿ ಬಾರಿಸಿದಂತೆ ರುಮು ರುಮು ಹೊಡೆಯುತ್ತಿದ್ದ ಬೇಸಿಗೆ ಬಿಸಿಲಲ್ಲಿ ಭಾಗಜ್ಜಿ ಲಕ್ಕವ್ವನ ಮನೆ ಕಡೆ ದುಡುದುಡು ನಡೆದು ಹೋಗುತ್ತಿದ್ದಳು. ತೇರಿನ ಗಾಲಿ ಸಾಗಿದಂತಾಗಿತ್ತು. ಈಕಿಗೇನು ಈ ಹೊತ್ತಿನಲ್ಲಿ ಇಷ್ಟು ಅವಸರ ಎಂದು ಎಲ್ಲರೂ ಅಂದುಕೊಳ್ಳುತ್ತಿದ್ದರು. ಆಕೆಯ ಬಡಿಗೆ ಮುಂದೆ ಮುಂದೆ, ಈಕೆ ಅದರ ಹಿಂದೆ ಹಿಂದೆ. ಆದರೂ ಬಡಿಗೆ ಮೀಟುತ್ತಿದ್ದ ಒತ್ತರ ನೋಡಿದರೆ ಏನೋ ಭಾರೀ ಕೆಲಸಕ್ಕೇ ಹೊರಟಂತೆ ಕಾಣುತ್ತಿತ್ತು. "ಏನ್ ಮುದುಕಿ ಎಷ್ಟ ಅವಸರದಾಗ, ಕೆಟ್ಟ ಬಿಸಲಾಗ ಹೊರಟೀ, ಏನ್ ಅದೆಂಥಾ ಅರ್ಜೆಂಟ್ ಕೆಲಸ?" ಎಂದು ಮೇಲಿನ ಮನೆ ಫಕೀರಪ್ಪ